ಹುಣಸೂರು ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ನಮ್ಮ ಶಾಸಕ ವಿಜಯಶಂಕರ್‌ರವರು ಮನೆಗ ಬಂದು ಕಣ್ಣೀರುಹಾಕಿ ಯಡಿಯೂರಪ್ಪನವರೇ, ಆ ಕ್ಷೇತ್ರಕ್ಕೆ ಹೋಗುವುದಕ್ಕೆ ಆಗುವುದಿಲ್ಲವೆಂದು ಹೇಳಿದಾಗ ಆ ಕ್ಷಣದಲ್ಲೇ ನಾನು ಪ್ರಸ್ತಾಪ ಮಾಡದೇ ಇದ್ದಿದ್ದರೆ ಸಭೆ ಪ್ರಾರಂಭವಾದ ಮೇಲೆ ಮಧ್ಯದಲ್ಲಿ ಕಾನೂನು ಚೌಕಟ್ಟಿನಲ್ಲಿ ಪ್ರಸ್ತಾಪಿಸುವುದು ಸರಿಯಾಗಲಿಕ್ಕಿಲ್ಲ. ನಿಮ್ಮನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಿದೆ ಹಾಗುತ್ತದೇನೋ ಎಂಬ ಕಾರಣಕ್ಕಾಗಿ ನಾನು ಪ್ರಸ್ತಾಪಿಸಿದೆ. ದಯಮಾಡಿ ತಾವು ಅದನ್ನು ಅನ್ಯಥಾ ಭಾವಿಸಬಾರದು. ಇದು ಗಂಭೀರವಾದ ಸಂಗತಿ ಆಗಿರುವುದರಿಂದ ತಾವು ಅಪ್ಪಣೆ ಕೊಟ್ಟರೆ, ಈ ಸದನದ ಕಾರ್ಯಕಲಾಪಕ್ಕೆ ನಮ್ಮಿಂದ ಅಡ್ಡಿಯಾಗುತ್ತದೆ ಎಂದರೆ ಕಾರ್ಯಕಲಾಪ ನಡೆಯಲಿ, ಎಲ್ಲಾರೀತಿಯ ಸಹಕಾರ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇಲ್ಲಿ ಕೂತು ಕಾರ್ಯಕಲಾಪ ನಡೆಯದಿರುವಂತೆ ನೋಡಿಕೊಳ್ಳುವ ಸಂಸ್ಕೃತಿಯಲ್ಲಿ ಬೆಳೆದಂತಹ ಪಕ್ಷ ನಮ್ಮದಲ್ಲ. ಆದ್ದರಿಂದ ದಯಮಾಡಿ ಇದರ ಮಹತ್ವ ತಾವು ಅರ್ಥಮಾಡಿಕೊಂಡು ಸೂಕ್ತ ಸಮಯ ನಿಗದಿಮಾಡಿ ಇದಕ್ಕೊಂದು ಪರಿಹಾರ ಹುಡುಕಬೇಕು. ಇದಕ್ಕೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಅತ್ಯಂತ ವಿನಯದಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ವರದಿಗಳನ್ನು ಒಪ್ಪಿಸುವುದು

ಶ್ರೀ ಯು.ಆರ್. ಸಭಾಪತಿ : ಬೆಂಗಳೂರಿನ ಕೋರಮಂಗಲ ಬಡಾವಣೆಯಲ್ಲಿ ನಿರ್ಮಿಸುತ್ತಿರುವ ರಾಷ್ಟ್ರೀಯ ಕ್ರೀಡಾವಸತಿ ಸಮುಚ್ಚಯ ಮೇಲಿನ ಪ್ರಥಮ ವರದಿಯನ್ನು ಅಂದಾಜು ಸಮಿತಿಯ ಸದಸ್ಯನಾದ ನಾನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ವರದಿಯನ್ನು ಒಪ್ಪಿಸಲಾಯಿತು

ಶ್ರೀ ಹೆಚ್.ಎನ್. ನಂಜೇಗೌಡ : ಒಂದು ವಿನಂತಿ ಏನೆಂದರೆ ನಮ್ಮ ಸ್ನೇಹಿತರೊಬ್ಬರು ಕೊಲೆ ಕೇಸ್ ಬಗ್ಗೆ ಮೆನಷನ್ಮಾಡಲು ಅವಕಾಶ ಕೇಳಿದರು ಕೆ.ಜಿ.ಎಫ್. ಸದಸ್ಯರೂ ಕೇಳಿದರು. ಬಹಶಃ ಲಂಚ್ ಅವರ್ ಆದಮೇಲೆ ಅವರಿಗೆಲ್ಲಾ ಅನುವು ಮಾಡಿಕೊಡಬೇಕು. ಹಾಗೂ ನಮ್ಮ ನಾಯಕರು ಎತ್ತಿದ ವಿಷಯಕ್ಕೂ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಆಗಬಹುದು.

ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ (ಮುಂದುವರೆದದ್ದು)

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಅಧ್ಯಕ್ಷರೇ, ಇವತ್ತಿನ ದಿವಸ ನಾನು ಪ್ರಮುಖವಾಗಿ ಪ್ರಸ್ತಾಪ ಮಾಡುವುದು ಸರ್ಕಾರದ ಕೆಲವು ಲೋಪದೋಷಗಳನ್ನು ಮತ್ತು ಸರ್ಕಾರ ಯಾವ ದಿಕ್ಕಿನಲ್ಲಿ ಹೋಗುತ್ತಿದೆ, ಅದರ ಆಡಳಿತವೈಖರಿ ಏನು, ಆಡಳಿತ ನಡೆಸುವಾಗ ಯಾವ ರೀತಿ ಇವರು ನಡೆದುಕೊಂಡಿದ್ದಾರೆ ಮತ್ತು ಈ ರಾಜ್ಯದ ಜನರ ಏಳಿಗೆಗಾಗಿ ಅಭಿವೃದ್ಧಿಗಾಗಿ ಎಷ್ಟರಮಟ್ಟಿಗೆ ಇವರು ಕೆಲಸ ಮಾಡಿದ್ದಾರೆ ಎಂಬ ಬಗ್ಗೆ ಅದೇ ರೀತಿಯಾಗಿ ಬರಗಾಲದ ಬವಣೆಯಲ್ಲಿರುವ ಜನರನ್ನು ಪರಿಹಾರ ಕೊಡುವ ಕೆಲಸ ಎಷ್ಟರಮಟ್ಟಿಗೆ ಮಾಡಿದ್ದಾರೆ ಮತ್ತು ಟ್ರಾನ್ಸ್‌ಫರ್ ಹಗರಣದಲ್ಲಿ ಎಷ್ಟರಮಟ್ಟಿಗೆ ಸರ್ಕಾರದವರೇ ನೇರವಾಗಿ ಇನ್‌ವಾಲ್ವ್ ಆಗಿದ್ದಾರೆಂದು ಕೂಡ ನಾವು ಪ್ರಸ್ತಾಪ ಮಾಡಬೇಕಾಗುತ್ತದೆ. ಇವತ್ತಿನದಿವಸ ಮಾನ್ಯ ವಿರೋಧಪಕ್ಷದ ನಾಯಕ ಶ್ರೀ ಯಡಿಯೂರಪ್ಪನವರು ತಂದಿರುವ ಅವಿಶ್ವಾಸ ಸೂಚನೆ, ಬಹಶಃ ಸದನದಲ್ಲಿರುವ ಇಡೀ ವಿರೋಧಪಕ್ಷದ ಜನ ಅದಕ್ಕೆ ರುಜು ಹಾಕಿ ಬೆಂಬಲಿಸಬಹುದಿತ್ತು